**ದಿನಾಂಕಃ 07.02.2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಮುಖ್ಯ ವಿಚಾರಣೆಃ ಅರ್ಜಿದಾರರ ಪರ ಮಾನ್ಯ ವಕೀಲರಿಂದ.**

ಪಿಂಚಣಿಯ ಬಗ್ಗೆ ಹಾಜರುಪಡಿಸಿರುವ ಧೃಡಿಕೃತ ಪತ್ರವನ್ನು **ನಿಪಿ 19** ಎಂದು, ಜಿ.ಪಿ.ಎಫ್ ನೀಡಿದ ಬಗ್ಗೆ ಹಾಜರುಪಡಿಸಿರುವ ಪತ್ರದ ಧೃಡಿಕೃತ ಪ್ರತಿಯನ್ನು **ನಿಪಿ 20** ಎಂದು, ಸಮೂಹ ವಿಮೆಗೆ ಸಂಬಂಧಪಟ್ಟಂತೆ ನೀಡಿದ ಪತ್ರದ ಧೃಡಿಕೃತ ಪ್ರತಿಯನ್ನು **ನಿಪಿ 21** ಎಂದು, ಕೆ.ಜಿ.ಐ.ಡಿ ಪಾವತಿಗೆ ಸಂಬಂಧಪಟ್ಟ ದಾಖಲಾತಿಯ ಧೃಡಿಕೃತ ಪ್ರತಿಯನ್ನು **ನಿಪಿ 22** ಎಂದು ಗುರುತಿಸಲಾಯಿತು.

1ನೇ ಎದುರುದಾರರು ಏಕ ಪಕ್ಷೀಯವಾಗಿರುವುದರಿಂದ ಪಾಟೀ ಸವಾಲು ಏನೂ ಇಲ್ಲ ಎಂದು ತೆಗೆದುಕೊಳ್ಳಲಾಯಿತು.

**ಪಾಟೀ ಸವಾಲುಃ 2ನೇ ಎದುದಾರರ ಪರ ಮಾನ್ಯ ವಕೀಲರಿಂದ.**

ನಮ್ಮ ಇಲಾಖೆ ಕರ್ನಾಟಕ ಸರ್ಕಾರ ಅಧೀನದಲ್ಲಿ ಕೆಲಸ ಮಾಡುತ್ತದೆ. ನಾನು 10 ವರ್ಷಗಳಿಂದ ಎ.ಜಿ ಯಲ್ಲಿ ಕೆಲಸ ಮಾಡುತ್ತಿದ್ದೇನೆ. ಮೃತನು ಗ್ರೂಪ್ ಡಿ ನೌಕರರಾಗಿ ಕೆಲಸ ಮಾಡುತ್ತಿದ್ದರು. ಮೃತರ ನೇಮಕಾತಿ ಆದೇಶವನ್ನು ನೋಡಿರುತ್ತೇನೆ. ಮೃತರ ಬ್ಯಾಂಕ್ ಖಾತೆಗೆ ಪ್ರತಿ ತಿಂಗಳ ಸಂಬಳ ಜಮಾ ಆಗುತ್ತಿತ್ತು ಎಂದರೆ ಸರಿ. ಮೃತರಿಗೆ ರೂ.49,869/- ಒಟ್ಟು ವೇತನ ಬರುತ್ತಿತ್ತು. ರೂ.43,520/- ನಿವ್ವಳ ವೇತನ ಬರುತ್ತಿತ್ತು. ಮೃತರ ಕುಟುಂಬಕ್ಕೆ ಅನುಕಂಪದ ಆಧಾರದ ಮೇರೆಗೆ ಕೆಲಸ ನೀಡಿಲ್ಲ, ಆ ಬಗ್ಗೆ ಅರ್ಜಿ ನೀಡಿದ್ದು, ಅದು ವಿಚಾರಣಾ ಹಂತದಲ್ಲಿ ಇರುತ್ತದೆ. ಜಿ.ಎಫ್ ಗೆ ಸಂಬಂಧಿಸಿದಂತೆ ರೂ.4,000/- ನೌಕರರಿಂದ ಕಟಾವಣೆ ಆಗುತ್ತಿತ್ತು. ಮೃತರಿಗೆ ರೂ.49,869/- ಸಂಬಳ ಬರುತ್ತಿರಲಿಲ್ಲ ಎಂದರೆ ಸರಿಯಲ್ಲ. ಮೃತರು

ನಮಗೆ ಪರಿಚಯಸ್ಥರಾದ ಕಾರಣ ಅವರ ಕುಟುಂಬಕ್ಕೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಮೃತರು ವಯಕ್ತಿಕ ವಿಮೆ ಪಡೆದಿದ್ದ ಬಗ್ಗೆ ನನಗೆ ಮಾಹಿತಿ ಇಲ್ಲ.

**(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲ್ಪಟ್ಟಿದೆ).**

**(ಓ.ಹೇ.ಕೇ.ಸ.ಇ.)**

**1ನೇ ಎಸ್‌ಸಿಜೆ ಮತ್ತು ಎಸಿಜೆಎಮ್**

**ಬೆಂಗಳೂರು**